
ಮಿಶ್ಕಾನ ಗಂಜಿ

ನಿಕೋಲಾಯ್ ನೋಸೊವ್





ಕಳೆದ ಬೇಸಿಗೆಯಲ್ಲಿ ನಾನು ನನ್ನ ತಾಯಿಯೊಂದಿಗೆ ಹಳ್ಳಿಯಲ್ಲಿ ವಾಸಿಸುತ್ತಿದ್ದಾಗ, ಮಿಶ್ಕಾ ನಮ್ಮೊಂದಿಗೆ ಇರಲು ಬಂದನು. ಅವನಿಲ್ಲದೆ ನಾನು ತುಂಬಾ ಒಂಟಿಯಾಗಿದ್ದುದರಿಂದ ಅವನನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಅಮ್ಮನಿಗೂ ಅವನನ್ನು ನೋಡಿ ಸಂತೋಷವಾಯಿತು.
"ನೀನು ಬಂದಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ," ಎಂದು ಅವಳು ಹೇಳಿದಳು. "ನೀವು ಇಬ್ಬರು ಹುಡುಗರು ಒಬ್ಬರಿಗೊಬ್ಬರು ಜೊತೆಗಿರಬಹುದು. ನಾನು ನಾಳೆ ಬೆಳಿಗ್ಗೆ ಬೇಗ ಪಟ್ಟಣಕ್ಕೆ ಹೋಗಬೇಕು, ಮತ್ತು ನಾನು ಯಾವಾಗ ಹಿಂದಿರುಗುತ್ತೇನೆಂದು ನನಗೆ ಗೊತ್ತಿಲ್ಲ. ನೀವು ಇಲ್ಲಿ ನಿಮ್ಮಷ್ಟಕ್ಕೆ ನೀವೇ ನಿಭಾಯಿಸಿಕೊಳ್ಳಬಹುದಲ್ಲವೆ?"
"ಖಂಡಿತವಾಗಿಯೂ ನಮಗೆ ಸಾಧ್ಯ," ಎಂದು ನಾನು ಹೇಳಿದೆ. "ನಾವು ಈಗ ಚಿಕ್ಕಮಕ್ಕಳಲ್ಲ."
"ನಿಮ್ಮ ತಿಂಡಿಯನ್ನು ನೀವೇ ಮಾಡಿಕೊಳ್ಳಬೇಕು. ಗಂಜಿ ಬೇಯಿಸುವುದು ನಿಮಗೆ ಗೊತ್ತೇ?"
"ನನಗೆ ಗೊತ್ತು," ಎಂದು ಮಿಶ್ಕಾ ಹೇಳಿದನು. "ಅದು ಏನೂ ಕಷ್ಟವಲ್ಲ."
"ಮಿಶ್ಕಾ, ನಿನಗೆ ಗೊತ್ತಿದೆ ಎಂದು ನೀನೂ ಖಚಿತವಾಗಿ ಹೇಳಬಹುದೆ? ನೀನು ಯಾವಾಗ ಗಂಜಿ ಬೇಯಿಸಿದ್ದೀಯ?"ನಾನು ಕೇಳಿದೆ.
"ಚಿಂತಿಸಬೇಡ. ಅಮ್ಮ ಬೇಯಿಸುವುದನ್ನು ನಾನು ನೋಡಿದ್ದೇನೆ. ಅದನ್ನು ನನಗೆ ಬಿಡು. ನಾನು ನಿನ್ನನ್ನು ಹಸಿವಿನಿಂದ ಬಳಲುವಂತೆ ಮಾಡುವುದಿಲ್ಲ. ಅತ್ಯಂತ ರುಚಿಕರವಾದ ಅತ್ಯುತ್ತಮ ಗಂಜಿಯನ್ನು ನಾನು ನಿನಗಾಗಿ ಮಾಡುತ್ತೇನೆ." ಮಿಶ್ಕಾ ಹೇಳಿದನು.
ಬೆಳಿಗ್ಗೆ ಅಮ್ಮ ನಮ್ಮ ಚಹಾಕ್ಕಾಗಿ ಸ್ವಲ್ಪ ಬ್ರೆಡ್ ಮತ್ತು ಸ್ವಲ್ಪ ಜಾಮ್ ಇಟ್ಟುಹೋಗಿ ಓಟ್ಸ್ ಎಲ್ಲಿದೆ ಎಂದು ನಮಗೆ ತೋರಿಸಿದಳು. ಅದನ್ನು ಹೇಗೆ ಬೇಯಿಸಬೇಕೆಂಬುದನ್ನು ತಿಳಿಸಿ ಹೇಳಿದಳು, ಆದರೆ ನಾನು ಕೇಳಲು ತಲೆಕೆಡಿಸಿಕೊಳ್ಳಲಿಲ್ಲ. ಮಿಶ್ಕಾಗೆ ಅದರ ಬಗ್ಗೆ ಎಲ್ಲವೂ ಗೊತ್ತಿದ್ದರೆ ನಾನು ಏಕೆ ತಲೆಕೆಡಿಸಿಕೊಳ್ಳಬೇಕು, ಎಂದು ನಾನು ಯೋಚಿಸಿದೆ.
ನಂತರ ಅಮ್ಮ ಹೊರಟುಹೋದಳು. ಮಿಶ್ಕಾ ಮತ್ತು ನಾನು ಮೀನು ಹಿಡಿಯಲು ನದಿಯ ಕಡೆಗೆ ಹೋಗಲು ತೀರ್ಮಾನಿಸಿದೆವು. ನಾವು ನಮ್ಮ ಮೀನು ಹಿಡಿಯುವ ಸಾಮಾನುಗಳನ್ನು ತೆಗೆದುಕೊಂಡು ಕೆಲವು ಹುಳಗಳನ್ನು ಅಗೆದು ತೆಗೆದೆವು.
"ಒಂದು ನಿಮಿಷ," "ನಾವು ನದಿಯ ಕಡೆಗೆ ಹೋದರೆ ಗಂಜಿಯನ್ನು ಯಾರು ಬೇಯಿಸುತ್ತಾರೆ?" ಎಂದು ನಾನು ಕೇಳಿದೆ.



“ಅಡಿಗೆ ಮಾಡುವ ತೊಂದರೆ ಯಾರಿಗೆ ಬೇಕು?” ಮಿಶ್ಕಾ ಹೇಳಿದನು. “ಅದು ತುಂಬಾ ತೊಂದರೆ ಕೆಲಸ. ಬದಲಿಗೆ ನಾವು ಬ್ರೆಡ್ ಮತ್ತು ಜಾಮ್ ತಿನ್ನಬಹುದು. ಸಾಕಷ್ಟು ಬ್ರೆಡ್ ಇದೆ. ನಮಗೆ ಹಸಿವೆ ಆದಾಗ ಗಂಜಿ ಬೇಯಿಸೋಣ.”

ನಾವು ಜ್ಯಾಮ್ ಸ್ಯಾಂಡ್‌ವಿಚ್‌ಗಳನ್ನು ಮಾಡಿಕೊಂಡು ನದಿಯ ಕಡೆಗೆ ಹೊರಟೆವು. ನಾವು ಈಜಲು ನೀರಿಗೆ ಇಳಿದು ನಂತರ ಮರಳಿನ ಕಡಲತೀರದಲ್ಲಿ ಮಲಗಿ ನಮ್ಮನ್ನು ಒಣಗಿಸಿಕೊಂಡು ಸ್ಯಾಂಡ್‌ವಿಚ್‌ಗಳನ್ನು ತಿಂದೆವು. ನಂತರ ನಾವು ಮೀನು ಹಿಡಿದೆವು. ನಾವು ಬಹಳ ಹೊತ್ತು ಕುಳಿತಿದ್ದೆವು ಆದರೆ ಕಚ್ಚುವ ಮೀನುಗಳು ಇರಲಿಲ್ಲ. ನಮಗೆ ಅತಿ ಚಿಕ್ಕ ಮೀನುಗಳು ದೊರೆತವು. ನಾವು ದಿನದ ಬಹುಪಾಲು ಸಮಯವನ್ನು ನದಿಯ ಬಳಿ ಕಳೆದವು. ಮಧ್ಯಾಹ್ನದ ಕೊನೆಯಲ್ಲಿ ನಮಗೆ ಭಯಂಕರ ಹಸಿವಾಗಿ ಏನಾದರೂ ತಿನ್ನಬೇಕೆಂದು ಮನೆಗೆ ಮರಳಿದೆವು.

“ಹಾಗಾದರೆ, ಮಿಶ್ಕಾ, ನೀನೇ ಹೇಳು. ನಾವೀಗ ಏನು ಮಾಡೋಣ?” ನಾನು ಕೇಳಿದೆ.

“ಸ್ವಲ್ಪ ಗಂಜಿ ಮಾಡೋಣ, ಅದು ಅತ್ಯಂತ ಸುಲಭ.” ಮಿಶ್ಕಾ ಹೇಳಿದನು.

“ಸರಿ,” ನಾನು ಹೇಳಿದೆ.

ನಾವು ಒಲೆ ಹಚ್ಚಿದೆವು. ಮಿಶ್ಕಾ ಹಿಟ್ಟು ಮತ್ತು ಪಾತ್ರೆಯನ್ನು ತೆಗೆದುಕೊಂಡು ಬಂದನು.

“ಸಾಕಷ್ಟು ಮಾಡು. ನನಗೆ ತುಂಬಾ ಹಸಿವಾಗಿದೆ.”

ಅವನು ಪಾತ್ರೆಯನ್ನು ಬಹುತೇಕ ಹಿಟ್ಟಿನಿಂದ ತುಂಬಿಸಿ ಅಂಚಿನವರೆಗೆ ನೀರು ಸುರಿದನು.

“ಅದು ತುಂಬಾ ನೀರಲ್ಲವೇ?” ನಾನು ಕೇಳಿದೆ.

“ಇಲ್ಲ, ಅಮ್ಮ ಹೀಗೆ ಮಾಡುತ್ತಾಳೆ. ನೀನು ಒಲೆಯನ್ನು ಹೊತ್ತಿಸು. ಗಂಜಿಯ ಕೆಲಸವನ್ನು ನನಗೆ ಬಿಡು.”



ಹೀಗಾಗಿ ನಾನು ಬೆಂಕಿಯನ್ನು ಉರಿಯುತ್ತಿಟ್ಟೆ. ಮಿಶ್ಕಾ ಗಂಜಿಯನ್ನು ಬೇಯಿಸುತ್ತಿದ್ದಾಗ, ಅಂದರೆ ಅವನು ಕುಳಿತು ಪಾತ್ರೆಯನ್ನು ನೋಡುತ್ತಿದ್ದಂತೆ ಗಂಜಿ ತಾನಾಗಿಯೇ ಬೇಯುತ್ತಿತ್ತು.

ಸ್ವಲ್ಪ ಹೊತ್ತಿನಲ್ಲೇ ತುಂಬಾ ಕತ್ತಲಾಯಿತು ಮತ್ತು ನಾವು ದೀಪ ಹಚ್ಚಬೇಕಾಯಿತು. ಗಂಜಿ ಬೇಯುತ್ತಲೇ ಇತ್ತು. ಇದ್ದಕ್ಕಿದ್ದಂತೆ ನಾನು ಮೇಲೆ ನೋಡಿದೆ. ಪಾತ್ರೆಯ ಮುಚ್ಚಳ ಮೇಲೆ ಏರಿ ಗಂಜಿ ಬದಿಯಿಂದ ಹೊರಗೆ ಸುರಿಯುತ್ತಿರುವುದನ್ನು ಕಂಡೆ.

“ಏಯ್, ಮಿಶ್ಕಾ, ನೋಡಲ್ಲಿ. ಗಂಜಿಗೆ ಏನಾಗಿದೆ?” ನಾನು ಕೇಳಿದೆ.

“ಏಕೆ, ಅದಕ್ಕೆ ಏನು ತಪ್ಪಾಗಿದೆ?”

“ಅದು ಪಾತ್ರೆಯಿಂದಲೇ ಹೊರಗೆ ಏರುತ್ತಿದೆ!”

ಮಿಶ್ಕಾ ಒಂದು ಚಮಚ ಹಿಡಿದು ಗಂಜಿಯನ್ನು ಮತ್ತೆ ಪಾತ್ರೆಯೊಳಗೆ ತಳ್ಳಲು ಆರಂಭಿಸಿದನು. ಅವನು ತಳ್ಳಿದಂತೆ ಅದು ಉಬ್ಬುತ್ತಲೇ ಇತ್ತು ಮತ್ತು ಬದಿಯಿಂದ ಹೊರಗೆ ಸುರಿಯುತ್ತಲೇ ಇತ್ತು.

“ಅದಕ್ಕೆ ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಬಹುಶಃ ಅದು ಸಿದ್ಧವಾಗಿದೆಯೇ?”

ನಾನು ಒಂದು ಚಮಚ ತೆಗೆದುಕೊಂಡು ಸ್ವಲ್ಪ ರುಚಿ ನೋಡಿದೆ, ಆದರೆ ಹಿಟ್ಟು ಇನ್ನೂ ಗಟ್ಟಿಯಾಗಿಯೇ ಮತ್ತು ಒಣದಾಗಿಯೇ ಇತ್ತು.

“ನೀರೆಲ್ಲಾ ಎಲ್ಲಿ ಹೋಯಿತು?”

“ನನಗೆ ಗೊತ್ತಿಲ್ಲ, ನಾನು ಬಹಳಷ್ಟು ಹಾಕಿದ್ದೆ. ಬಹುಶಃ ಪಾತ್ರೆಯಲ್ಲಿ ಒಂದು ರಂಧ್ರ ಇರಬಹುದು?” ಮಿಶ್ಕಾ ಹೇಳಿದನು.

ನಾವು ಪಾತ್ರೆಯನ್ನೆಲ್ಲಾ ಹುಡುಕಿದೆವು ಆದರೆ ರಂಧ್ರದ ಯಾವುದೇ ಗುರುತು ಇರಲಿಲ್ಲ.

“ಉಗಿಯಾಗಿ ಹೋಗಿರಬೇಕು,” ಎಂದನು. “ನಾವು ಇನ್ನೂ ಸ್ವಲ್ಪ ನೀರು ಹಾಕಬೇಕು.”

ಅವನು ಪಾತ್ರೆಯಿಂದ ಸ್ವಲ್ಪ ಗಂಜಿಯನ್ನು ತೆಗೆದು ಒಂದು ತಟ್ಟೆಯಲ್ಲಿ ಹಾಕಿದನು. ನೀರಿಗೆ ಜಾಗ ಮಾಡಲು ಅವನು ಸಾಕಷ್ಟು ಗಂಜಿಯನ್ನು ತೆಗೆದುಹಾಕಬೇಕಾಯಿತು. ನಂತರ ನಾವು ಪಾತ್ರೆಯನ್ನು ಮತ್ತೆ ಒಲೆಯ ಮೇಲೆ ಇಟ್ಟು ಇನ್ನೂ ಸ್ವಲ್ಪ ಬೇಯಲು ಬಿಟ್ಟೆವು. ಅದು ಬೇಯುತ್ತಲೇ ಇತ್ತು. ಸ್ವಲ್ಪ ಹೊತ್ತಿನ ನಂತರ ಅದು ಮತ್ತೆ ಬದಿಯಿಂದ ಗಂಜಿ ಹೊರಚೆಲ್ಲಲು ಆರಂಭಿಸಿತು

“ಏಯ್, ಏನಿದು! ಇದು ಪಾತ್ರೆಯಲ್ಲೇ ಏಕೆ ಉಳಿಯುವುದಿಲ್ಲ?” ಎಂದು ಮಿಶ್ಕಾ ಕೂಗಿದನು.
ಅವನು ತನ್ನ ಚಮಚವನ್ನು ಎತ್ತಿಕೊಂಡು ಇನ್ನೂ ಸ್ವಲ್ಪ ಗಂಜಿಯನ್ನು ಹೊರತೆಗೆದು ಮತ್ತೊಂದು ಕಪ್ ನೀರನ್ನು ಅದಕ್ಕೆ ಸೇರಿಸಿದನು.
“ಅದನ್ನು ನೋಡು,. “ನೀರು ತುಂಬಾ ಇದೆ ಎಂದು ನೀನು ಅಂದುಕೊಂಡಿದ್ದೆ.” ಮಿಶ್ಕಾ ಹೇಳಿದನು
ಗಂಜಿ ಬೇಯುತ್ತಲೇ ಇತ್ತು. ಸ್ವಲ್ಪ ಹೊತ್ತಿನಲ್ಲೇ ಅದು ಮುಚ್ಚಳವನ್ನು ಎತ್ತಿ ಮತ್ತೆ ತೆವಳುತ್ತಾ ಹೊರಬರಲು ಶುರುಮಾಡಿತು!
ನಾನು ಹೇಳಿದೆ: “ನೀನು ತುಂಬಾ ಹೆಚ್ಚು ಹಿಟ್ಟು ಹಾಕಿರಬೇಕು. ಅದು ಬೇಯುವಾಗ ಉಬ್ಬುತ್ತದೆ ಮತ್ತು ಪಾತ್ರೆಯಲ್ಲಿ ಅದಕ್ಕೆ ಸಾಕಷ್ಟು ಜಾಗವಿಲ್ಲ.”
“ಹೌದು, ಅದೇ ಇರಬೇಕು,” ಎಂದ ಮಿಶ್ಕಾ. “ಇದೆಲ್ಲಾ ನಿನ್ನ ತಪ್ಪು. ನೀನು ಹಸಿದಿದ್ದೆ ಎಂದು ಹೇಳಿದ್ದು ನೆನಪಿದೆಯಾ, ಅದಕ್ಕೇ ತುಂಬಾ ಹಾಕು ಎಂದು ನನಗೆ ಹೇಳಿದೆ?”
“ಎಷ್ಟು ಹಾಕಬೇಕು ಎಂದು ನನಗೆ ಹೇಗೆ ಗೊತ್ತು? ಅಡಿಗೆ ಮಾಡುವುದು ಹೇಗೆ ಎಂದು ಗೊತ್ತಿರಬೇಕಾದವನು ನೀನೇ.”
“ಹಾಗೇ ಮಾಡುತ್ತೇನೆ. ನೀನು ನಡುನಡುವೆ ತಲೆಹಾಕದೇ ಇದ್ದಿದ್ದರೆ ಇಷ್ಟೊತ್ತಿಗಾಗಲೇ ಅದನ್ನು ಬೇಯಿಸುತ್ತಿದ್ದೆ.”
“ಸರಿ, ಬೇಯಿಸು, ಇನ್ನು ನಾನು ಒಂದು ಮಾತೂ ಆಡುವದಿಲ್ಲ.”
ನಾನು ಮುನಿಸಿಕೊಂಡು ಹೊರಟೆ. ಮಿಶ್ಕಾ ಗಂಜಿ ಬೇಯಿಸುವುದನ್ನು ಮುಂದುವರಿಸಿದನು. ಅಂದರೆ, ಅವನು ಹೆಚ್ಚುವರಿ ಗಂಜಿಯನ್ನು ಹೊರ ತೆಗೆದು ನೀರು ಸೇರಿಸುತ್ತಲೇ ಇದ್ದನು. ಬೇಗನೇ ಇಡೀ ಮೇಜು ಅರ್ಧಬೇಯಿಸಿದ ಗಂಜಿಯ ತಟ್ಟೆಗಳಿಂದ ತುಂಬಿಹೋಯಿತು. ಆದರೂ ಅವನು ಪ್ರತಿ ಸಲ ನೀರು ಸೇರಿಸುತ್ತಿದ್ದನು.
ಕೊನೆಗೆ ನನ್ನ ತಾಳ್ಮೆ ಮುಗಿಯಿತು.
“ನೀನು ಸರಿಯಾಗಿ ಮಾಡುತ್ತಿಲ್ಲ. ಹೀಗೆ ಮಾಡಿದರೆ ಗಂಜಿ ನಾಳೆ ಬೆಳಗ್ಗೆಯವರೆಗೂ ಬೇಯುವುದೇ ಇಲ್ಲ.”
“ಸರಿ, ದೊಡ್ಡ ರೆಸ್ಟೋರೆಂಟ್‌ಗಳಲ್ಲಿ ಹೀಗೇ ಮಾಡುತ್ತಾರೆ. ನಿನಗೆ ಗೊತ್ತಿರಲಿಲ್ಲವೇ? ಬೆಳಿಗ್ಗೆ ಸಿದ್ಧವಾಗಿರಲೆಂದು ಅವರು ಯಾವಾಗಲೂ ಹಿಂದಿನ ರಾತ್ರಿ ಊಟವನ್ನು ಬೇಯಿಸುತ್ತಾರೆ.”
“ಅದು ರೆಸ್ಟೋರೆಂಟ್‌ಗಳಿಗೆ ಸರಿ. ಅವರಿಗೆ ಬೇಗ ಮಾಡಬೇಕಾದ ಅಗತ್ಯವಿಲ್ಲ ಏಕೆಂದರೆ ಅವರ ಬಳಿ ಬೇರೆ ಆಹಾರ ರಾಶಿರಾಶಿಯಲ್ಲಿ ಇರುತ್ತವೆ.”
“ನಮಗೂ ಬೇಗ ಮಾಡಬೇಕಾದ ಅಗತ್ಯವಿಲ್ಲ.”
“ಇಲ್ಲವೇ! ನನಗೆ ಹಸಿವಿನಿಂದ ಪ್ರಾಣ ಹೋಗುತ್ತಿದೆ. ಅದಲ್ಲದೆ ಮಲಗುವ ಸಮಯವೂ ಆಗಿದೆ. ಎಷ್ಟು ತಡವಾಗಿದೆ ನೋಡು.”
“ನಿನಗೆ ಮಲಗಲು ಸಾಕಷ್ಟು ಸಮಯ ಸಿಗುತ್ತದೆ,” ಎಂದು ಅವನು ಹೇಳಿ, ಇನ್ನೊಂದು ಗ್ಲಾಸ್ ನೀರನ್ನು ಪಾತ್ರೆಗೆ ಸುರಿದನು. ಇದ್ದಕ್ಕಿದ್ದಂತೆ ಏನು ತಪ್ಪಾಗಿದೆ ಎಂದು ನನಗೆ ಹೊಳೆಯಿತು,
“ನೀನು ತಣ್ಣೀರು ಸೇರಿಸುತ್ತಲೇ ಇದ್ದರೆ ಅದು ಬೇಯುವುದೇ ಇಲ್ಲ,” ಎಂದು ನಾನು ಹೇಳಿದೆ.
“ನೀರು ಇಲ್ಲದೆ ಗಂಜಿ ಬೇಯಿಸಬಹುದು ಎಂದು ನೀನೆಂದುಕೊಂಡಿದ್ದೀಯಾ?”
“ಇಲ್ಲ, ಆ ಪಾತ್ರೆಯಲ್ಲಿ ಇನ್ನೂ ತುಂಬಾ ಹೆಚ್ಚು ಹಿಟ್ಟು ಇದೆ ಎಂದು ನನಗೆ ಅನ್ನಿಸುತ್ತದೆ.”
ನಾನು ಪಾತ್ರೆಯನ್ನು ತೆಗೆದುಕೊಂಡು, ಅರ್ಧ ಹಿಟ್ಟನ್ನು ಹೊರಚೆಲ್ಲಿ, ಅದರಲ್ಲಿ ನೀರು ತುಂಬಲು ಹೇಳಿದೆ.
ಅವನು ಮಗ್ ತೆಗೆದುಕೊಂಡು ಬಕೆಟ್‌ನ ಬಳಿಗೆ ಹೋದನು.
“ಛೇ,” ಎಂದು ಅವನು ಹೇಳಿದನು. “ನೀರೆಲ್ಲಾ ಮುಗಿದುಹೋಗಿದೆ.”
“ಈಗ ನಾವು ಏನು ಮಾಡೋಣ? ಕಗ್ಗತ್ತಲಾಗಿದೆ, ನಮಗೆ ಬಾವಿ ಸಿಗುವುದೇ ಇಲ್ಲ.”

“ಛೇ, ನಾನು ಕ್ಷಣಾರ್ಧದಲ್ಲಿ ನೀರು ತರುತ್ತೇನೆ.”

ಅವನು ಬೆಂಕಿಕಡ್ಡಿಗಳನ್ನು ತೆಗೆದುಕೊಂಡು, ಬಕೆಟ್ಟಿಗೆ ಹಗ್ಗವನ್ನು ಕಟ್ಟಿ ಬಾವಿಯ ಕಡೆ ಹೊರಟನು. ಕೆಲವೇ ನಿಮಿಷಗಳಲ್ಲಿ ಅವನು ಹಿಂದಿರುಗಿದನು.

“ನೀರೆಲ್ಲಿದೆ?” ಎಂದು ನಾನು ಅವನನ್ನು ಕೇಳಿದೆ.

“ನೀರು? ಅಲ್ಲಿ ಬಾವಿಯಲ್ಲಿ.”

“ಹುಚ್ಚರಂತೆ ಮಾತಾಡಬೇಡ. ಬಕೆಟ್ ಅನ್ನು ಏನು ಮಾಡಿದ್ದೀಯ?”

“ಬಕೆಟ್? ಅದೂ ಬಾವಿಯಲ್ಲಿದೆ.”

“ಬಾವಿಯಲ್ಲಿ?”

“ಅಹುದು.”

“ಅಂದರೆ ಅದನ್ನು ಕೆಳಗೆ ಬೀಳಿಸಿದ್ದೀಯ?”

“ಅಹುದು.”

“ಅಯ್ಯೋ, ನೀನು ಮೂರ್ಖ ಕತ್ತೆ! ನಾವು ಹಸಿವಿನಿಂದ ಸಾಯುತ್ತೇವೆ. ಈಗ ನಾವು ನೀರನ್ನು ಹೇಗೆ ತರುತ್ತೇವೆ?”

“ನಾವು ಕೆಟಲ್ ನಿಂದ ನೀರು ತರಬಹುದು.”

ನಾನು ಕೆಟಲ್ ತೆಗೆದುಕೊಂಡೆ. “ಹಗ್ಗ ಕೊಡು.”

“ನನ್ನ ಬಳಿ ಇಲ್ಲ.”

“ಅದು ಎಲ್ಲಿದೆ?”

“ಕೆಳಗೆ ಅಲ್ಲಿ.”

“ಕೆಳಗೆ ಎಲ್ಲಿ?”

“ಬಾವಿಯಲ್ಲಿ.”

“ಹಾಗಾದರೆ ಹಗ್ಗದ ಜೊತೆಗೆ ಬಕೆಟ್ ಅನ್ನೂ ಕೆಳಗೆ ಬೀಳಿಸಿದ್ದೀಯ?”

“ಅಹುದು.”

ನಾವು ಇನ್ನೊಂದು ಹಗ್ಗದ ತುಂಡಿಗಾಗಿ ಹುಡುಕಲು ಶುರುಮಾಡಿದೆವು. ಆದರೆ ಒಂದೂ ಸಿಗಲಿಲ್ಲ.

“ನಾನು ಹೋಗಿ ನೆರೆಹೊರೆಯವರನ್ನು ಕೇಳುತ್ತೇನೆ,” ಎಂದು ಮಿಶ್ಕಾ ಹೇಳಿದನು.

“ನೀನು ಹೋಗುವ ಅಗತ್ಯವಿಲ್ಲ,” ಎಂದು ನಾನು ಹೇಳಿದೆ. “ಸಮಯ ನೋಡು. ಎಲ್ಲರೂ ಮಲಗಿಕೊಂಡಿದ್ದಾರೆ.”

ಅದೃಷ್ಟವಶಾತ್, ನನಗೆ ನೀರಡಿಕೆಯಾಗುತ್ತಿತ್ತು. ಒಂದು ಗುಟುಕು ನೀರಿಗಾಗಿ ನಾನು ಅಕ್ಷರಶಃ ಸಾಯುತ್ತಿದ್ದೆ.

ಮಿಶ್ಕಾ ಹೇಳಿದನು: “ಯಾವಾಗಲೂ ಹೀಗೇ. ನೀರಿಲ್ಲದಾಗ ನಿನಗೆ ಯಾವಾಗಲೂ ದಾಹವಾಗುತ್ತದೆ. ಅದಕ್ಕೇ ಜನರಿಗೆ ಯಾವಾಗಲೂ ಮರುಭೂಮಿಯಲ್ಲಿ ದಾಹವಾಗುತ್ತದೆ—ಏಕೆಂದರೆ ಮರುಭೂಮಿಯಲ್ಲಿ ನೀರಿಲ್ಲ.”

“ಮರುಭೂಮಿಗಳ ಬಗ್ಗೆ ಮಾತು ಬಿಡು,” ಎಂದು ನಾನು ಹೇಳಿದೆ. “ನೀನು ಹೋಗಿ ಹಗ್ಗ ಹುಡುಕು.”

“ನಾನು ಅದನ್ನೆಲ್ಲಿ ಹುಡುಕಲಿ? ನಾನು ಎಲ್ಲೆಡೆ ಹುಡುಕಿದ್ದೇನೆ. ಮೀನು ಹಿಡಿಯುವ ದಾರವನ್ನು ಬಳಸುವಾ.”

“ಅದು ಸಾಕಷ್ಟು ಗಟ್ಟಿಯಾಗಿದೆಯೇ?”

“ಅಹುದು. ನನಗೆ ಅನ್ನಿಸುತ್ತದೆ.”

“ಇಲ್ಲದಿದ್ದರೆ ಏನು?”

“ಇಲ್ಲದಿದ್ದರೆ, ಅದು ತುಂಡು-ತುಂಡಾಗುವದು.”



ನಾವು ಮೀನು ಹಿಡಿಯುವ ದಾರವನ್ನು ಬಿಚ್ಚಿ, ಅದನ್ನು ಕೆಟಲ್ ಗೆ ಕಟ್ಟಿ ಬಾವಿಯ ಕಡೆಗೆ ಹೊರಟೆವು. ನಾನು ಕೆಟಲ್ ನ್ನು ಬಾವಿಯೊಳಗೆ ಇಳಿಸಿ ನೀರಿನಿಂದ ತುಂಬಿಸ ತೊಡಗಿದೆ. ದಾರವು ವ್ಹಾಯೊಲಿನ್ ವಾದ್ಯದ ತಂತಿಯಂತೆ ಬಿಗಿಯಾಗಿತ್ತು.

"ಇದು ತುಂಡಾಗಲಿದೆ," ನಾನು ಹೇಳಿದೆ. "ನೋಡು."

"ನಾವು ಅದನ್ನು ತುಂಬಾ, ತುಂಬಾ ಎಚ್ಚರಿಕೆಯಿಂದ ಎತ್ತಿದರೆ ಬಹುಶಃ ತುಂಡಾಗಲಾರದು," ಮಿಶ್ಕಾ ಹೇಳಿದನು.

ನಾನು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಅದನ್ನು ಎತ್ತಿದೆ. ನಾನು ಅದನ್ನು ನೀರಿನ ಮೇಲಕ್ಕೆ ಎತ್ತುತ್ತಿದ್ದೆ, ಆಗ ಧಪ್ಪನೆ ಸಪ್ಪಳ ಮಾಡುತ್ತ ಕೆಟಲ್ ಕಾಣೆಯಾಯಿತು.

"ಅದು ತುಂಡಾಯಿತೇ?" ಮಿಶ್ಕಾ ಕೇಳಿದನು.

"ಖಂಡಿತವಾಗಿಯೂ ಆಯಿತು. ಈಗ ನಾವು ನೀರನ್ನು ಹೇಗೆ ತರಬಹುದು?"

"ಸಮೋವಾರ್ ಅನ್ನು ಪ್ರಯತ್ನಿಸೋಣ," ಮಿಶ್ಕಾ ಹೇಳಿದನು.

"ಬೇಡ. ನಾವು ಸಮೋವಾರ್ ಅನ್ನು ನೇರವಾಗಿ ಬಾವಿಗೆ ಎಸೆದರೂ ಸರಿ. ಕಡಿಮೆ ತೊಂದರೆ. ಅದಲ್ಲದೆ, ನಮ್ಮ ಬಳಿ ಇನ್ನೂ ಹಗ್ಗವಿಲ್ಲ."


"ಸರಿ ಹಾಗಾದರೆ, ಪಾತ್ರೆಯನ್ನು ಬಳಸು."

"ಎಸೆಯಲು ನಮ್ಮ ಬಳಿ ಅಷ್ಟು ಪಾತ್ರೆಗಳಿಲ್ಲ," ನಾನು ಹೇಳಿದೆ.

"ಹಾಗಾದರೆ, ಒಂದು ಟಂಬ್ಲರ್ ಅನ್ನು ಪ್ರಯತ್ನಿಸು."

"ಟಂಬ್ಲರ್ ತುಂಬ ನೀರನ್ನು ತೆಗೆದುಕೊಳ್ಳುತ್ತಾ ರಾತ್ರಿಯ ಉಳಿದ ಸಮಯವನ್ನೆಲ್ಲ ಕಳೆಯಲು ನಿನಗೆ ಇಷ್ಟವೇ?"

"ಆದರೆ ನಾವೇನು ಮಾಡಬೇಕು? ನಾವು ಗಂಜಿ ಬೇಯಿಸುವುದನ್ನು ಮುಗಿಸಲೇಬೇಕು. ಅದಲ್ಲದೆ, ನನಗೆ ಬಾಯಾರಿಕೆಯಾಗಿದೆ."



“ಲೋಟದಿಂದ ನೀರು ತುಂಬುವ.” ನಾನು ಹೇಳಿದೆ. “ಹೇಗಿದ್ದರೂ ಅದು ಟಂಬ್ಲರ್‌ಗಿಂತ ಸ್ವಲ್ಪ ದೊಡ್ಡದು.”

ನಾವು ಮತ್ತೆ ಮನೆಗೆ ಹೋದೆವು, ಅದು ಉರುಳದಂತೆ ಮೀನುಗಾರಿಕೆಯ ದಾರವನ್ನು ಲೋಟಕ್ಕೆ ಕಟ್ಟಿ ಮತ್ತೆ ಬಾವಿಯ ಕಡೆಗೆ ಹೋದೆವು. ನಾವು ಹೊಟ್ಟೆತುಂಬ ನೀರು ಕುಡಿದ ನಂತರ ಮಿಶ್ಕಾ ಹೇಳಿದನು:

“ಅದೇ ಯಾವಾಗಲೂ ಆಗುವುದು—ನಿಮಗೆ ಬಾಯಾರಿದಾಗ ನೀವು ಸಮುದ್ರವನ್ನೇ ಕುಡಿದುಬಿಡಬಹುದು ಎಂದೆನ್ನಿಸುತ್ತದೆ. ಆದರೆ ಕುಡಿಯಲು ಆರಂಭಿಸಿದಾಗ ಒಂದು ಲೋಟ ಸಾಕು ಎಂದು ತಿಳಿಯುತ್ತದೆ. ಅದಕ್ಕೆ ಕಾರಣ ಜನರು ಸಹಜವಾಗಿಯೇ ದುರಾಸೆಯವರು.”

“ಬಡಬಡಿಸುವುದನ್ನು ನಿಲ್ಲಿಸಿ ಲೋಟವನ್ನು ಇಲ್ಲಿ ಕೊಡು. ನಾವು ಅದನ್ನು ಬಾವಿಯಿಂದ ನೇರವಾಗಿ ನೀರಿನಿಂದ ತುಂಬಬಹುದು. ಅದು ನಮಗೆ ಹನ್ನೆರಡು ಬಾರಿ ಅತ್ತಿತ್ತ ಓಡಾಡುವುದನ್ನು ಉಳಿಸುತ್ತದೆ.”

ಮಿಶ್ಕಾ ಲೋಟವನ್ನು ತಂದು ಬಾವಿಯ ಅಂಚಿನಲ್ಲೇ ಇಟ್ಟನು. ನಾನು ನನ್ನ ಮೊಣಕೈಯಿಂದ ಅದನ್ನು ಕೆಳಗೆ ಬೀಳಿಸುವುದನ್ನು ತಡೆದೆ.

“ಮೂರ್ಖ ಕತ್ತೆ,” ನಾನು ಹೇಳಿದೆ. “ಅದನ್ನು ನನ್ನ ಮೊಣಕೈಯ ಕೆಳಗೇ ಇಡುವುದರ ಅರ್ಥವೇನು? ಅದನ್ನು ಹಿಡಿದುಕೊಂಡು ಬಾವಿಯಿಂದ ಸಾಧ್ಯವಾದಷ್ಟು ದೂರ ಇರು, ಇಲ್ಲದಿದ್ದರೆ ಅದನ್ನು ನೀರಿನೊಳಗೆ ಹಾರಿಸಿಬಿಡುತ್ತೀಯ.”

ಮಿಶ್ಕಾ ಲೋಟವನ್ನು ತೆಗೆದುಕೊಂಡು ಬಾವಿಯಿಂದ ದೂರ ಸರಿದನು. ನಾನು ಅದನ್ನು ತುಂಬಿಸಿ ಮನೆಗೆ ಹಿಂದಿರುಗಿದೆವು. ಅಷ್ಟರೊಳಗೆ ನಮ್ಮ ಗಂಜಿ ತುಂಬಾ ತಣ್ಣಗಾಗಿತ್ತು ಮತ್ತು ಬೆಂಕಿ ಆರಿಹೋಗಿತ್ತು. ನಾವು ಅದನ್ನು ಮತ್ತೆ ಹೊತ್ತಿಸಿ ಬೇಯಿಸಲು ಪಾತ್ರೆಯನ್ನು ಮತ್ತೆ ಒಲೆಯ ಮೇಲೆ ಇಟ್ಟೆವು. ಬಹಳ ಸಮಯದ ನಂತರ ಅದು ಕುದಿಯಲು ಆರಂಭಿಸಿತು, ನಿಧಾನವಾಗಿ ದಪ್ಪವಾಗುತ್ತಾ ಪ್ಲಾಪ್ ಪ್ಲಾಪ್ ಎಂಬ ಶಬ್ದಗಳನ್ನು ಮಾಡಿತು.

“ಕೇಳಿದೆಯಾ?” ಮಿಶ್ಕಾ ಹೇಳಿದನು. “ನಮಗೆ ಬೇಗನೇ ಅದ್ಭುತವಾದ ಗಂಜಿ ಸಿಗಲಿದೆ.”



ನಾನು ಚಮಚದಲ್ಲಿ ಸ್ವಲ್ಪ ತೆಗೆದುಕೊಂಡು ರುಚಿ ನೋಡಿದೆ. ಅದು ಭಯಾನಕವಾಗಿತ್ತು! ಅದಕ್ಕೆ ಅಸಹ್ಯವಾದ ಕಹಿ, ಸುಟ್ಟ ರುಚಿ ಇತ್ತು, ಮತ್ತು ನಾವು ಅದಕ್ಕೆ ಉಪ್ಪು ಹಾಕುವುದನ್ನೇ ಮರೆತಿದ್ದೆವು. ಮಿಶ್ಕಾ ಕೂಡ ಅದನ್ನು ರುಚಿ ನೋಡಿ ತಕ್ಷಣವೇ ಉಗುಳಿಬಿಟ್ಟನು.

"ಬೇಡ," ಅವನು ಹೇಳಿದನು. "ಅಂತಹ ಪದಾರ್ಥವನ್ನು ತಿನ್ನುವುದಕ್ಕಿಂತ ಹಸಿವಿನಿಂದ ಸಾಯುವುದೇ ನನಗೆ ಮೇಲು."

"ನೀನು ಅದನ್ನು ತಿಂದಿದ್ದರೆ ಖಂಡಿತವಾಗಿಯೂ ಸಾಯುತ್ತಿದ್ದೆ," ನಾನು ಹೇಳಿದೆನು.

"ಆದರೆ ನಾವು ಏನು ಮಾಡಬೇಕು?"

"ನನಗೆ ಗೊತ್ತಿಲ್ಲ."

"ಕತ್ತೆ!" ಮಿಶ್ಕಾ ಕೂಗಿದನು. "ನಾವು ಮೀನುಗಳನ್ನು ಮರೆತಿದ್ದೇವೆ."

"ಈ ರಾತ್ರಿ ಹೊತ್ತಿನಲ್ಲಿ ನಾವು ಮೀನುಗಳ ತೊಂದರೆ ಆರಂಭಿಸುವುದಿಲ್ಲ. ಬೇಗನೇ ಬೆಳಗಾಗುತ್ತದೆ."


"ನಾವು ಅವನ್ನು ಕುದಿಸುವುದಿಲ್ಲ, ಹುರಿಯುತ್ತೇವೆ. ಅವು ಒಂದು ನಿಮಿಷದಲ್ಲಿ ಸಿದ್ಧವಾಗುತ್ತವೆ, ನೋಡು."

"ಓಹ್, ಸರಿ," ನಾನು ಹೇಳಿದೆ. "ಆದರೆ ಅದು ಗಂಜಿಯಷ್ಟು ಸಮಯ ತೆಗೆದುಕೊಳ್ಳುವುದಾದರೆ, ನನ್ನನ್ನು ಅದರಿಂದ ಹೊರಗಿಡು."

"ಅದು ಐದು ನಿಮಿಷಗಳಲ್ಲಿ ಸಿದ್ಧವಾಗುತ್ತದೆ, ನೀನು ನೋಡು."

ಮಿಶ್ಕಾ ಮೀನುಗಳನ್ನು ಸ್ವಚ್ಛಗೊಳಿಸಿ ಅವುಗಳನ್ನು ಹುರಿಯುವ ಬಾಣಲೆಯ ಮೇಲೆ ಇಟ್ಟನು. ಬಾಣಲೆ ಬಿಸಿಯಾಯಿತು ಮತ್ತು ಮೀನುಗಳು ತಳಕ್ಕೆ ಅಂಟಿಕೊಂಡವು. ಅವನು ಅವುಗಳನ್ನು ಕಿತ್ತುಹಾಕಲು ಪ್ರಯತ್ನಿಸಿ ಚೆನ್ನಾಗಿ ಹಾಳುಮಾಡಿದನು.

ನಾನು ಹೇಳಿದೆ: "ಬೆಣ್ಣೆಯಿಲ್ಲದೆ ಮೀನು ಹುರಿಯಲು ಯಾರು ಪ್ರಯತ್ನಿಸುತ್ತಾರೆ?"



ಮಿಶ್ಕಾ ಒಂದು ಎಣ್ಣೆಯ ಬಾಟಲಿಯನ್ನು ತೆಗೆದುಕೊಂಡು ಸ್ವಲ್ಪವನ್ನು ಬಾಣಲೆಗೆ ಸುರಿದು ಅದು ಬೇಗ ಬೇಯಲೆಂದು ಅದನ್ನು ನೇರವಾಗಿ ಕೆಂಡಗಳ ಮೇಲೆ ಇಟ್ಟನು. ಎಣ್ಣೆ ಚಿಟಚಿಟನೆ ಸಿಡಿಯಿತು ಮತ್ತು ಕಟಕಟನೆ ಸದ್ದುಮಾಡಿತು. ಇದ್ದಕ್ಕಿದ್ದಂತೆ ಅದಕ್ಕೆ ಬೆಂಕಿ ಹೊತ್ತಿಕೊಂಡಿತು. ಮಿಶ್ಕಾ ಹುರಿಯುವ ಬಾಣಲೆಯನ್ನು ಕಿತ್ತಿ ಹೊರಗೆ ಇಟ್ಟನು. ನಾನು ಅದರ ಮೇಲೆ ನೀರು ಸುರಿಯಲು ಬಯಸಿದೆ, ಆದರೆ ಮನೆಯಲ್ಲಿ ಒಂದು ಹನಿ ನೀರೂ ಇರಲಿಲ್ಲ. ಆದ್ದರಿಂದ ಎಣ್ಣೆಯೆಲ್ಲಾ ಸುಟ್ಟುಹೋಗುವವರೆಗೆ ಅದು ಉರಿಯುತ್ತಲೇ ಇತ್ತು. ಹೊಗೆಯಿಂದ ಕೋಣೆ ತುಂಬಿತು. ಮೀನುಗಳ ಬದಲು ಕೆಲವು ಸುಟ್ಟ ಕೆಂಡಗಳಷ್ಟೇ ಉಳಿದವು.

"ಸರಿ," ಮಿಶ್ಕಾ ಹೇಳಿದನು, "ಈಗ ನಾವು ಏನನ್ನು ಹುರಿಯಲಿದ್ದೇವೆ?"

"ಇನ್ನು ಹುರಿಯುವುದು ಬೇಡ. ಒಳ್ಳೆಯ ಆಹಾರವನ್ನು ಹಾಳುಮಾಡುವುದರ ಜೊತೆಗೆ ನೀನು ಮನೆಯನ್ನು ಸುಟ್ಟುಹಾಕುವ ಸಾಧ್ಯತೆಯೂ ಇದೆ. ಒಂದು ದಿನಕ್ಕೆ ಸಾಕಷ್ಟು ಅಡಿಗೆ ಮಾಡಿದ್ದೀಯ!"

"ಆದರೆ ನಾವು ಏನು ತಿನ್ನಬೇಕು?"

ನಾವು ಕಚ್ಚಾ ಹಿಟ್ಟನ್ನು ತಿನ್ನಲು ಪ್ರಯತ್ನಿಸಿದೆವು ಆದರೆ ಅದರಲ್ಲಿ ಅಷ್ಟೇನೂ ಮಜಾ ಇರಲಿಲ್ಲ. ನಾವು ಕಚ್ಚಾ ಈರುಳ್ಳಿಯನ್ನು ಪ್ರಯತ್ನಿಸಿದ್ದೆವು, ಆದರೆ ಅದು ಕೂಡ ಕಹಿಯಾಗಿತ್ತು. ನಾವು ಎಣ್ಣೆಯನ್ನು ಕುಡಿಯಲು ಪ್ರಯತ್ನಿಸಿದೆವು. ಆಗ ನಮಗೆ ವಾಕರಿಕೆ ಬಂತು. ಕೊನೆಗೆ ನಾವು ಜಾಮ್ ಪಾತ್ರೆಯನ್ನು ಕಂಡುಹಿಡಿದು, ಅದನ್ನು ನೆಕ್ಕಿ ಸ್ವಚ್ಛಗೊಳಿಸಿ ಮಲಗಲು ಹೋದೆವು. ಆಗಲೇ ತುಂಬಾ ತಡವಾಗಿತ್ತು.

ನಾವು ಬೆಳಿಗ್ಗೆ ಹಸಿವಿನಿಂದ ಎದ್ದೆವು. ಮಿಶ್ಕಾ ಸ್ವಲ್ಪ ಗಂಜಿ ಬೇಯಿಸಲು ಬಯಸಿದನು, ಆದರೆ ಅವನು ಹಿಟ್ಟನ್ನು ಹೊರತೆಗೆದದ್ದನ್ನು ನೋಡಿದಾಗ ನನ್ನ ಮೈಯೆಲ್ಲಾ ತಣ್ಣಗಾಯಿತು.



“ಅದನ್ನು ಮಾಡಬೇಡ,” ನಾನು ಹೇಳಿದೆನು. “ನಾನು ನಮ್ಮ ನತಾಶಾ ಅತ್ತೆಯ ಬಳಿಗೆ ಹೋಗಿ, ನಮಗಾಗಿ ಸ್ವಲ್ಪ ಗಂಜಿ ಬೇಯಿಸಿಕೊಡುವಂತೆ ಕೇಳುತ್ತೇನೆ.”
ನಾವು ನತಾಶಾ ಅತ್ತೆಯ ಬಳಿಗೆ ಹೋಗಿ ಅವಳಿಗೆ ಎಲ್ಲವನ್ನೂ ಹೇಳಿದೆವು ಮತ್ತು ಅವಳು ನಮಗಾಗಿ ಸ್ವಲ್ಪ ಗಂಜಿ ಬೇಯಿಸಿದರೆ ಅವಳ ತೋಟದ ಕಳೆ ತೆಗೆಯುವುದಾಗಿ ಮಾತುಕೊಟ್ಟೆವು. ಅವಳಿಗೆ ನಮ್ಮ ಮೇಲೆ ಕರುಣೆ ಬಂದು, ಅವಳು ನಮ್ಮ ಗಂಜಿ ಬೇಯಿಸುತ್ತಿರುವಾಗ ನಮಗೆ ಸ್ವಲ್ಪ ಹಾಲು ಮತ್ತು ಕೇಕನ್ನು ಕೊಟ್ಟಳು. ನಾವು ಅದನ್ನೆಲ್ಲ ತಿನ್ನುತ್ತಲೇ ಇದ್ದೆವು. ನತಾಶಾ ಅತ್ತೆಯ ಚಿಕ್ಕ ಮಗ, ವೋವ್ಕಾ, ಕಣ್ಣುಗಳು ಹೊರಬೀಳುವಂತೆ ನಮ್ಮನ್ನು ನೋಡುತ್ತ ನಿಂತಿದ್ದನು.
ಕೊನೆಗೆ ನಮಗೆ ಸಾಕಾಯಿತು. ನತಾಶಾ ಅತ್ತೆ ನಮಗೆ ಒಂದು ಕೊಂಡಿ ಮತ್ತು ಹಗ್ಗ ಕೊಟ್ಟಳು. ನಾವು ಬಾವಿಯಿಂದ ಬಕೆಟ್ ಮತ್ತು ಕೆಟಲ್ ನ್ನು ಮೀನು ಹಿಡಿಯುವಂತೆ ಹೊರತೆಗೆಯಲು ಹೋದೆವು. ಕೊನೆಗೂ ಅವುಗಳನ್ನು ಮೇಲಕ್ಕೆ ಎಳೆಯುವದರಲ್ಲಿ ಯಶಸ್ವಿಯಾದೆವು. ಆದರೆ ಇದಕ್ಕೆಲ್ಲ ನಮಗೆ ತುಂಬಾ ಸಮಯ ಹಿಡಿಯಿತು. ಆದರೆ ಅದೃಷ್ಟವಶಾತ್ ಏನೂ ಕಳೆದುಹೋಗಲಿಲ್ಲ. ಅದರ ನಂತರ, ಮಿಶ್ಕಾ, ನಾನು ಮತ್ತು ಚಿಕ್ಕ ವೋವ್ಕಾ ನತಾಶಾ ಅತ್ತೆಯ ತೋಟದ ಕಳೆ ತೆಗೆದೆವು.
ಮಿಶ್ಕಾ ಹೇಳಿದನು: “ಕಳೆ ತೆಗೆಯುವುದು ಅಷ್ಟು ಕಷ್ಟದ ಕೆಲಸವಲ್ಲ. ಯಾರಾದರೂ ಅದನ್ನು ಮಾಡಬಹುದು. ಅದು ಸುಲಭ. ಏನೇ ಇದ್ದರೂ ಗಂಜಿ ಬೇಯಿಸುವುದಕ್ಕಿಂತ ತುಂಬಾ ಸುಲಭ.”